ಸಾರ್ವಜನಿಕ ಶಿಕ್ಷಣ ಇಲಾಖೆ
ಕೇಂದ್ರೀಕೃತ ದಾಖಲಾತಿ ಘಟಕ,
ಕೆ.ಜಿ. ರಸ್ತೆ, ಕಾವೇರಿ ಭವನದ ಎದುರು
ಬೆಂಗಳೂರು 560 002.
Department of Public Instruction,
Centralised Admission Cell,
K.G. Road, Opposite Cauvery Bhavan,
Bangalore - 560 002
☎ : 22271866, 22228805
: 22483140, 22483145
Fax : ಫ್ಯಾಕ್ಸ್ : 080 - 22271866
e-mail : ಇ-ಮೇಲ್ : cackarnataka@gmail.com

ವಿ.ಜಿ.ದಿವಾಕರ್
ಅಪರ ಆಯುಕ್ತರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ.

ಅ.ಸ.ಪತ್ರ ಸಂಖ್ಯೆ:ಸಿಎಸಿ-8/ಪ್ರೌ.ಶಾ.ಶಿ.ನೇ:1/2012-13 ದಿನಾಂಕ: 16-06-2012

ಮಾನ್ಯರೆ,

ವಿಷಯ:- 2012 ನೇ ಜೂನ್ ಮಾಹೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರುಗಳ ಹುದ್ದೆಗಳ ನೇರ ನೇಮಕಾತಿಗಾಗಿ ನಡೆಸಲಿರುವ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗಳ ಪರಿಷ್ಕೃತ ವೇಳಾಪಟ್ಟಿಯ ಬಗ್ಗೆ

ಉಲ್ಲೇಖ:- 1) ಸರ್ಕಾರಿ ಆದೇಶ ಸಂಖ್ಯೆ ಇಡಿ 90 ಎಂಸಿಡಿ 2010 (ಭಾಗ) ದಿನಾಂಕ 30-11-2011
2) ಈ ಕಛೇರಿ ಅ.ಸ.ಪ. ಸಂಖ್ಯೆ:ಸಿಎಸಿ-8/ಪ್ರೌ.ಶಾ.ಶಿ.ನೇ:1/2012-13 ದಿನಾಂಕ 23-05-2012

---------

2012 ನೇ ಜೂನ್ ಮಾಹೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು ಪ್ರೌಢಶಾಲಾ ಸಹ ಶಿಕ್ಷಕರನ್ನು ನೇರ ನೇಮಕಾತಿ ಮೂಲಕ ಆಯ್ಕೆ ಮಾಡುವ ಕುರಿತು ದಿನಾಂಕ 23-06-2012 ರಿಂದ 26-06-2012 ರವರೆಗೆ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯನ್ನು ಪ್ರಕಟಿಸಿರುವ ವೇಳಾಪಟ್ಟಿಯಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ (ಶೈಕ್ಷಣಿಕ ಜಿಲ್ಲೆಗಳೂ ಸೇರಿದಂತೆ) ನಡೆಸಲು ಸರ್ಕಾರವು ಈ ಮೊದಲು ತೀರ್ಮಾನಿಸಿತ್ತು.

ಪ್ರಸ್ತುತ, ಸದರಿ ಪರೀಕ್ಷೆಗೆ ಸಂಬಂಧಪಟ್ಟ ವೇಳಾಪಟ್ಟಿಯನ್ನು ಪರಿಷ್ಕರಿಸಲಾಗಿದ್ದು, ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯನ್ನು ದಿನಾಂಕ 15-07-2012 ರಿಂದ 18-07-2012 ರವರೆಗೆ ನಡೆಸಲು ತೀರ್ಮಾನಿಸಲಾಗಿದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಲಾಗಿದೆ ಹಾಗೂ ಉಲ್ಲೇಖ (2)ರ ಪತ್ರದಲ್ಲಿ ಕೋರಿರುವಂತೆ ದಿನಾಂಕ 15-07-2012 ರಿಂದ ನಡೆಯಲಿರುವ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗೆ ತಮ್ಮ ಸಹಕಾರವನ್ನು ನೀಡಲು ಕೋರುತ್ತೇನೆ. ಪರಿಷ್ಕೃತ ವೇಳಾಪಟ್ಟಿಯನ್ನು ಈ ಪತ್ರದೊಂದಿಗೆ ಕಳುಹಿಸಲಾಗಿದೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,

ಗೆ
ಶ್ರೀ_______________
ಜಿಲ್ಲಾಧಿಕಾರಿಗಳು
_________________ ಜಿಲ್ಲೆ

ಪು.ತಿ.ನೋ

ಪ್ರತಿಗಳನ್ನು ಈ ಕೆಳಕಂಡವರಿಗೆ ಕಳುಹಿಸಲಾಗಿದೆ.

1) ಸರ್ಕಾರದ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢಶಿಕಣ) ಶಿಕ್ಷಣ ಇಲಾಖೆ,
2) ಆಯುಕ್ತರು, ಸಾರ್ವ ಜನಿಕ ಶಿಕ್ಷಣ ಇಲಾಖೆ, ಬೆಂಗಳೂರು,
3) ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತಿಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
4) ಎಲ್ಲಾ ಜಿಲ್ಲೆಗಳ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು
5) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಗುಲ್ಬರ್ಗ,
6) ಸಹನಿರ್ದೇಶಕರುಗಳು.ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು. ಬೆಳಗಾವಿ, ಮತ್ತು ಗುಲ್ಬರ್ಗ
7) ಎಲ್ಲಾ ಜಿಲ್ಲೆಗಳ ಜಿಲ್ಲಾ ಖಜಾನೆ ಅಧಿಕಾರಿಗಳು,
8) ಎಲ್ಲಾ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರುಗಳು,
9) ಕಚೇರಿ ಪ್ರತಿಗಳು